ಸಿ.ಸಿ. ನಂಬ್ರಃ 1783/2013 ಪ್ರಾಸಾಃ11
ದಿನಾಂಕಃ 11.08.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

(ಈ ಹಿಂದೆ ನ್ಯಾಯಾಲಯದ ಮುಂದೆ ಸಲ್ಲಿಸಿದಂತೆ ಯಾವುದೇ ಫೋಟೋಗಳನ್ನು ಹಾಜರುಪಡಿಸಲು ಬಾಕಿ ಇಲ್ಲ ಎಂದು ಮಾನ್ಯ ಸ.ಸ.ಅರವರು ಪೊಲೀಸರಿಂದ ಮಾಹಿತಿ ಬಂದಿರುವುದಾಗಿ ತಿಳಿಸಿದ ಮೇರೆಗೆ ಸಾಕ್ಷಿಯ ಮುಂದುವರೆದ ವಿಚಾರಣೆಃ)

ದಿಃ 01-03-2013ರಂದು 3ನೇ ಆರೋಪಿಯನ್ನು ಪೊಲೀಸರು ನಮ್ಮ ಕಚೇರಿಗೆ ಕರೆ ತಂದಿದ್ದು, ನಮ್ಮ ಸಿಬ್ಬಂದಿಯವರಾದ ಚಾಸಾ-13 ಮತ್ತು 14 ರವರ ಸಮಕ್ಷಮ 3ನೇ ಆರೋಪಿ ಕಳ್ಳತನ ಮಾಡಿ ನಮ್ಮ ಸೊಸೈಟಿಯಲ್ಲಿ ಅಡಮಾನ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದು ಅದು ಲಕ್ಷ್ಮೀ ಪೆಡೆಂಟ್ ಆಗಿದ್ದು ಕೆಳಗೆ 6 ಮುತ್ತು ಇದ್ದು, ಅದನ್ನು ಚಾಸಾ-16 ರವರು ತೂಕ ಮಾಡಿದಾಗ 8.700 ಗ್ರಾಂಗಳು ಇರುವುದು ಕಂಡು ಬಂದಿದ್ದು, ಆಗ 3ನೇ ಆರೋಪಿ ಇರಿಸಿದ್ದ ಬಾಂಡು, ರಶೀದಿ ಮತ್ತು ಸದ್ರಿ ಆಭರಣವನ್ನು ದಾಖಲಾತಿಗಳೊಂದಿಗೆ ವಶಕ್ಕೆ ಪಡೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೂ ಜರುಗಿಸಿರುತ್ತಾರೆ.

ದಿಃ 11-01-2013 ರಂದು 1ನೇ ಆರೋಪಿಯನ್ನು ಪೊಲೀಸರು ನಮ್ಮ ಕಚೇರಿಗೆ ಕರೆ ತಂದಿದ್ದು, ನಮ್ಮ ಸಿಬ್ಬಂದಿಯವರಾದ ಚಾಸಾ-13 ಮತ್ತು 14 ರವರ ಸಮಕ್ಷಮ 1ನೇ ಆರೋಪಿ ತನ್ನದೇ ಮನೆಯಿಂದ ಕಳ್ಳತನ ಮಾಡಿ ನಮ್ಮ ಸೊಸೈಟಿಯಲ್ಲಿ ಅಡಮಾನ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದು ಅದು ಚಿನ್ನದ ಸರ ಆಗಿದ್ದು, ಅದನ್ನು ಚಾಸಾ-16 ರವರು ತೂಕ ಮಾಡಿದಾಗ 12.50 ಗ್ರಾಂಗಳು ಇರುವುದು ಕಂಡು ಬಂದಿದ್ದು, ಆಗ 1ನೇ ಆರೋಪಿ ಇರಿಸಿದ್ದ ಬಾಂಡು, ರಶೀದಿ ಮತ್ತು ಸದ್ರಿ ಆಭರಣವನ್ನು ದಾಖಲಾತಿಗಳೊಂದಿಗೆ ವಶಕ್ಕೆ ಪಡೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 2-30 ರಿಂದ 3-15 ಗಂಟೆಯವರೆಗೂ ಜರುಗಿಸಿರುತ್ತಾರೆ. ಈ ಕುರಿತಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಬಾಂಡು ಮತ್ತು ರಶೀದಿಯನ್ನು ನೋಡಿ ಗುರುತಿಸಿದ್ದು ಅವುಗಳ ದೃಡೀಕೃತ ನಕಲುಗಳನ್ನು ಮಾತ್ರ ಕಡತದೊಂದಿಗೆ ಹಾಜರುಪಡಿಸಿದ್ದು ಮೂಲ ಪ್ರತಿಗಳನ್ನು ಹಾಜರುಪಡಿಸದೆ ಇದ್ದ ಕಾರಣ ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಲ್ಲ. ಸದ್ರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಎಂ ಎಸ್ ರವರಿಂದಃ**

ಲಕ್ಷ್ಮೀ ಪದಕ ಮಹಿಳೆಯರು ಧರಿಸುವ ಆಭರಣವಾಗಿರುತ್ತದೆ. ಅದು ಮನೆಯದ್ದು ಎಂದು 3ನೇ ಆರೋಪಿ ಮಾಹಿತಿ ನೀಡಿರುತ್ತಾರೆ. ಆ ವೇಳೆಯಲ್ಲಿ ಆತನ ವಯಸ್ಸು 19 ವರ್ಷ. ಆತನಿಗೆ ಸಂಬಂಧಿಸಿದ ಆಭರಣ ಎಂದು ತೋರಿಸಲು ಅಡಮಾನ ಮಾಡುವ ವೇಳೆಗೆ ಯಾವುದೇ ರಶೀದಿಯನ್ನು ಸ್ವೀಕರಿಸಿಲ್ಲ. ನಮ್ಮ ಸಂಘದ ಬ್ಯಾಂಕು ಖಾತೆ ಇರುತ್ತದೆ. ರೂಪಾಯಿ 16 ಸಾವಿರ ಹಣವನ್ನು 3ನೇ ಆರೋಪಿಗೆ ನಗದಾಗಿ ನೀಡಿರುತ್ತೇವೆ. ಚೆಕ್ಕಿನ ಮೂಲಕ ಕೊಡಲು ತೊಂದರೆ ಇರಲಿಲ್ಲ. ನಗದನ್ನು ಆರೋಪಿಗೆ ನೀಡಿದ ಬಗ್ಗೆ ಆತನಿಂದ ಸ್ವೀಕೃತಿ ಪಡೆದಿರುತ್ತೇವೆ. ಸಾಲದ ಅರ್ಜಿಯನ್ನು ಮೊದಲಿಗೆ ಸ್ವೀಕರಿಸಿರುತ್ತೇವೆ.

3ನೇ ಆರೋಪಿಯ ಪೋಟೋವನ್ನು ತೆಗೆದುಕೊಂಡಿರಲಿಲ್ಲ. ಕಳ್ಳತನವಾಗಿರುವ ವಿಚಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪೊಲೀಸರು ಸೂಚಿಸಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಈಗ ಹೇಳಲಾಗುವುದಿಲ್ಲ. ಪೊಲೀಸರು ಪಂಚನಾಮೆ ಜರುಗಿಸಿ ಸಹಿ ಪಡೆದಿರುತ್ತಾರೆ. 3ನೇ ಆರೋಪಿ ಚಿನ್ನವನ್ನು ಅಡಮಾನ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮಿಂದ ರೂಪಾಯಿ 16 ಸಾವಿರ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆತ ನಮ್ಮ ಸೊಸೈಟಿಯಲ್ಲಿ ಯಾವುದೇ ಚಿನ್ನವನ್ನು ಅಡಮಾನ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಸೊಸೈಟಿಯಲ್ಲಿ ಯಾವುದೇ ವ್ಯವಹರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಚಿನ್ನಾಭರಣಗಳನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗಳನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ